ಕೊಪ್ಪಳ ಜಿಲ್ಲೆಯ ಗೊಂಡಬಾಳ ಗ್ರಾಮದ ಇಸ್ಮಾಯಿಲ್ ತಳಕಲ್ ಅವರದು ಸಮಕಾಲೀನ ಯುವ ಕಥೆಗಾರರಲ್ಲಿ ಮುಖ್ಯವಾದ ಹೆಸರು. ವೃತ್ತಿಯಿಂದ ಶಿಕ್ಷಕರು. 'ಮಾರಾಟವಾಗದ ಗೊಂಬೆ' ಕವನಸಂಕಲನ ಹಾಗೂ 'ಬೆತ್ತಲೆ ಸಂತ' ಕಥಾಸಂಕಲನ ಪ್ರಕಟಿತ ಕೃತಿಗಳು. ಕಥಾಸಂಕಲನಕ್ಕೆ 'ಬೆಸರಗರಹಳ್ಳಿ ರಾಮಣ್ಣ ಪ್ರಶಸ್ತಿ' ದೊರೆತಿದೆ.

ತೃಪ್ತಿಯ ಡೇಗು ಹೊರಬಿಡುತ್ತಿದ್ದ.

ತಿನ್ನುವ ಪದಾರ್ಥಗಳ ವಾಸನೆಗಳು ಇವನ ಮೂಗನ್ನೇ ಹುಡುಕಿಕೊಂಡು ಬಂದು ಬಂದು ಬಡಿದರೆ ಇನ್ನಷ್ಟು ಚುರುಕುಗೊಳ್ಳುತ್ತಿದ್ದ ಭರ್ಮನು ತನ್ನ ಕೇರಿಯ ಯಾವ ಗುಡಿಸಲಿನ ಒಲೆಯ ಮೇಲೆ ಕೋಳಿ ಕುದ್ಯಾಕತ್ತೈತಿ, ಯಾರ ಮನೆಯ ಡಬರಿಯೊಳಗ ಮೀನು ಬೇಯಾಕತ್ತೈತಿ ಎನ್ನುವುದನ್ನು ತಕ್ಷಣ ಆಘ್ರಾಣಿಸಿಕೊಂಡು ಏನಾದರೊಂದು ಮಸಲತ್ತು ಮಾಡಿ ಆ ಮನೆಯವರೊಂದಿಗೆ ಮಾತು ಬೆಳೆಸಿ ಅದರ ರುಚಿಯನ್ನು ಸವಿದಾಗಲೇ ಅವನ ಆತ್ಮಕ್ಕೊಂದಿಷ್ಟು ತೃಪ್ತಿ. ಇಲ್ಲದಿದ್ದರೆ ಆ ವಾಸನೆಯ ಮಹಿಮೆಯಿಂದಾಗಿ ನಿದ್ದೆ ಹತ್ತದೆ ಇಡಿ ರಾತ್ರಿ ಜಾಗರಾಣಿ ಮಾಡಬೇಕಾಗಿದ್ದಿತು. ಹೀಗೆ ತಿಂದು ತಿಂದು ಅವನ ಹೊಟ್ಟೆ ಊದಿಕೊಂಡಿದ್ದರಿಂದ ಅವನಿಗೆ 'ಹೊಟ್ಟಿ ಭರ್ಮ' ಎನ್ನುವ ಅಡ್ಡ ಹೆಸರು ಬಂದಿತ್ತು.

ಊರಾಗ ಯಾವ್ದಾದ್ರೂ ಮದುವೆ ಇದ್ರ ಮುಗೀತು. ಎರಡು ದಿನ ಅಲ್ಲೆ ಅವನ ಠಿಕಾಣಿ. ಊಟ ಇರುವ ಪೆಂಡಾಲ್ ಕಡೇನೆ ಅವನ ದೇಹ ಸುಳಿದಾಡುತ್ತದೆ. ಅವನೊಂದಿಗೆ ಅವನ ಕೇರಿಯ ಗ್ಯಾಂಗೂ ಅವನ ಹಿಂದೆ ಸದಾ ಇರುತ್ತಿತ್ತು. ಬರುವ ಬೀಗರಿಗೆ ಬೆಳಿಗ್ಗೆ ನಾಸ್ಟಾಕ್ಕಂತ ಮಾಡುವ ಉಪ್ಪಿಟ್ಟು ಖಾರ ಮಂಡಾಳಕ್ಕಾಗಿ ಊರವರೆಲ್ಲರೂ ತಿನ್ನುವವರೆಗೂ ಕಾಯ್ಕೊಂತ ನಿಂತು ಕೊನೆಗೂ ದೂರದಲ್ಲೆಲ್ಲೋ ನಿಲ್ಲಿಸಿ ಮದುವೆ ಮನೆಯವರು ಹಾಕಿದಾಗ ನಾಲ್ಕೈದು ಬಾರಿ ಹಾಕಿಸ್ಕೊಂಡು ತಿಂತಿದ್ದ ಹೊಟ್ಟಿಭರ್ಮ ಮತ್ತು ಅವನ ಗ್ಯಾಂಗು ಮಧ್ಯಾಹ್ನದ ಬುಂದೇವು, ಬದ್ನಿಕಾಯಿ ಪಲ್ಯ, ಘಮ್ಮೆನ್ನುವ ಸಾರು ಅನ್ನಕ್ಕಾಗಿ ಆಗಲೇ ಪಾಳೆ ಹಚ್ಚೆಬಿಡುತ್ತಿದ್ದರು. ಬೀಗರೂ ಊರವರೂ ತಿಂದಾದ ಮೇಲೆ ಉಳೀತು ಅಂದ್ರ ಇವರಿಗೆ ಸಿಗ್ತಿತ್ತು. ಇಲ್ಲ ಅಂದ್ರೆ ತಾವು ತಂದ ಪ್ಲೇಟಿನಲ್ಲಿ ಬರಿ ಅನ್ನ ಹಾಕಿಸ್ಕೊಂಡು ಮಕ ಗಂಟ್ ಮಾರಿ ಮಾಡಿ ಮನಿ ದಾರಿ ಹಿಡಿತಿದ್ರು. ಒಮ್ಮೊಮ್ಮೆ ಊಟ ಮಾಡುವವರನ್ನ ಆಸೆಗಣ್ಣಿನಿಂದ ನೋಡುತ್ತಾ ಪೆಂಡಾಲ್ ಬಳಿ ಬಂದು ನಿಂತ್ರ ಹನುಮಪ್ಪ ಗುಡಿಯ ನಿಂಗಪ್ಪಜ್ಜನೋ ಹೋಟೆಲ್ ಸಿದ್ದನೋ ಗದರಿಸಿ 'ಖಬರ್‌ಗೆಟ್ಟಾವ್ ತಂದು, ಬಿಟ್ರ ಕೇರಿನೂ ಊರನ್ನೂ ಒಂದ್ ಮಾಡಿಬಿಡ್ತಿರೇನ್ರಲೇ' ಅಂತ ಬೈದು ಕೈಯಾಗ ವನಮುರ್ಕಿ ಜುರ್ಲ ಹಿಡ್ಕೊಂಡು ದೂರ ಓಡಿಸಿಬಿಡ್ತಿದ್ರು. ಹಸಿವಿಗೋ, ಅಪರೂಪಕ್ಕ ರುಚಿಯಾದ ಊಟ ಸಿಗುತ್ತದಲ್ಲ ಅನ್ನೊ ಆಸೆಗೋ ಬಾಯಾಗ ಜೊಲ್ಲು ಸುರಿಸ್ಕೊಂತ ನಿಂತಿರುತ್ತಿದ್ದ ಹೊಟ್ಟಿ ಭರ್ಮನ ಗ್ಯಾಂಗು, ಊರವರು ಹಿಂಗ ಓಡಿಸಿಬಿಡ್ತಿದ್ರಿಂದ ಅತ್ತಕಡೆ ಹೋದಂಗ ಮಾಡಿ ಮತ್ತ ಬಂದು ಅಲ್ಲೇ ನಿಲ್ಲುತ್ತಿದ್ರು.

ಇಂತಹ ಗ್ಯಾಂಗಿನ ಕ್ಯಾಪ್ಟನ್ನಿನಂತಿದ್ದ ಹೊಟ್ಟಿ ಭರ್ಮ ಮೊನ್ನೆ ತನ್ನ ಕೇರಿಯವರೊಂದಿಗೆ ಸಾಲಿಗೆ ಹೋಗ್ತಿರುವಾಗ ಊರಿನ ಕೆಲ ಹುಡುಗರು ಹನುಮಂತ ದೇವರ ಗುಡಿಯೊಳಗ ಹೋಗಿ ಗಂಟಿ ಬಾರಿಸಿ ಬರುತ್ತಿದ್ದನ್ನು ದಿನವೂ ನೋಡುತ್ತಿದ್ದವನು ಇಂದು ಏಕೋ ತಾನೂ ಹಂಗ ಗಂಟಿ ಹೊಡಿಬೇಕೆನ್ನುವ ಆಸೆ ಅದೆಲ್ಲಿಂದಲೋ ಅವನ ತಲೆಯೊಳಗೆ ಮೊಳಕೆಯೊಡೆದುಬಿಡ್ತು. ಅದಕ್ಕ ತಡ ಮಾಡದೆ ದ್ಯಾಮನಿಗೆ 'ಬಾಲೆ ದ್ಯಾಮ, ನಾವೂ ಗುಡ್ಯಾಕ ಹೋಗಿ ಗಂಟಿ ಹೊಡ್ದು ಬರಾನ' ಅಂತ ಕರೆದಾಗ ಏಳನೇ ಕ್ಲಾಸಿನ್ಯಾಗ ಓದುತ್ತಿದ್ದ ಲಚುಮಿ 'ಏ ಮಾನಗೇಡಿ, ನಮ್ ಮಂದಿ ಆ ಗುಡ್ಯಾಕ ಹೋಗಬಾರ್ದು, ನೆಟ್ಟಗ ಸಾಲಿಕಡಿ ನಡಿಲೋ ಹೊಟ್ಟಿ ಭರ್ಮ' ಅಂತಂದು ಗದರಿದ್ದಳು.

'ಯಾಕ್ ಹೋಗಬಾರ್ದು?' ಎನ್ನುವ ಅವನ ಅಮಾಯಕ ಮೊಂಡು ಪ್ರಶ್ನೆಗೆ ಆರನೇ ಕ್ಲಾಸಿನ ದುರುಗಿ ತಲೆಗೊಂದು ಕುಕ್ಕಿ 'ಯಪ್ಪ ದೀಡ್ ಪಂಡಿತ, ಯಾಕ ಎತ್ತ ಏನು ಅಂತೆಲ್ಲ ಕೇಳಬ್ಯಾಡ. ನೀ ಇನ್ನೂ ಮಳ್ ಇದ್ದಂಗ ಇದಿ. ತಿಂದು ತಿಂದು ಹೊಟ್ಟಿ ಬೆಳೆಸಿಕೊಂಡಿ ಹೊರ್ತು ತಲ್ಯಾಗ ಇಟೂ ಬುದ್ದಿ ಇಲ್ಲ. ಮೊದ್ಲ ಲೇಟ್